**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಹೆಚ್.ಎಸ್.ಗೋಪಿನಾಥ್, ಶ್ರೀ ಕೇಶವ ಪ್ರಸಾದ್. ಎಸ್ ಹಾಗೂ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ ಇವರುಗಳು ನಿಯಮ 330 ರಡಿ ನೀಡಿರುವ ಸೂಚನೆಗೆ ಉತ್ತರ.**

**ಸೂಚನೆ:** ಬೆಂಗಳೂರಿನ ಮುಖ್ಯ ಮಂತ್ರಿಗಳ 1 ಲಕ್ಷ ಬಹುಮಹಡಿ ವಸತಿ ಯೋಜನೆಯಲ್ಲಿ ದರ ಏರಿಕೆಯಾಗಿರುವ ಮತ್ತು ಈ ಹಿಂದಿನಂತೆ 5 ಲಕ್ಷ ರೂಪಾಯಿಗಳಿಗೆ ನಿಗದಿ ಪಡಿಸಿದ ಸುಮಾರು 60 ಸಾವಿರ ಫಲಾನುಭವಿಗಳು ಬೆಂಗಳೂರಿನ ವಿವಿಧ ಬಾಗಗಳಲ್ಲಿ ಈ ಮೇಲ್ಕಂಡ ಯೋಜನೆ ಅಡಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ನಿರ್ಮಿಸುತ್ತಿರುವ ಬಹುಮಹಡಿ ಮನೆಗಳನ್ನು ಪಡೆಯಲು 2016-17 ರಲ್ಲಿ ಅಂದಿನ ಸರ್ಕಾರ ಒಂದು ಮನೆಯ ದರವನ್ನು ಸಾಮಾನ್ಯ ವರ್ಗದವರಿಗೆ ಸಹಾಯಧನ ಸೇರಿ 5.3 ಲಕ್ಷ ರೂ ಹಾಗೂ ಎಸ್.ಸಿ ಎಸ್ಟಿ ವರ್ಗದವರಿಗೆ 4.3 ಲಕ್ಷ ರೂ ನಿಗದಿಪಡಿಸಿ ಅರ್ಜಿ ಕರೆದು 1 ಲಕ್ಷ ಹಣವನ್ನು ಠೇವಣಿ ಮಾಡಿ 3 ವರ್ಷಗಳಾದರೂ ಒಂದೇ ಒಂದು ಮನೆಯನ್ನು ನೀಡಿಲ್ಲ ಆದರೆ ರಾಜೀವ್ ಗಾಂಧಿ ವಸತಿ ನಿಗಮವು ಈಗ ಫಲಾನುಭವಿಗಳಿಗೆ ನೋಂದಣಿ ವೆಚ್ಚ ಸೇರಿ ಮನೆಯ ದರವನ್ನು 9.6 ಲಕ್ಷ ರೂ ಗಳಿಗೆ ನಿಗದಿಪಡಿಸಿ 1 ತಿಂಗಳೊಳಗೆ ಈ ಹಣ ಕಟ್ಟಿ ನೋಂದಣಿ ಮಾಡಿಕೊಳ್ಳಿ ಇಲ್ಲದಿದ್ದರೆ ನಿಮ್ಮ ಮನೆಯ ಬುಕ್ಕಿಂಗನ್ನು ರದ್ದುಪಡಿಸಲಾಗುವುದೆಂದು ಡಿಮ್ಯಾಂಡ್ ನೋಟ್ ನೀಡಿ ಎಚ್ಚರಿಕೆ ನೀಡಿದ್ದು ಇದರಿಂದ 60,000 ಸಾವಿರ ಫಲಾನುಭವಿಗಳಿಗೆ ದಿಕ್ಕು ತೋಚದಂತಾಗಿದೆ,

ಆದ್ದರಿಂದ, ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಅತಿ ಶೀಘ್ರವಾಗಿ ಇದನ್ನು 2016-17 ರಲ್ಲಿ ನಿಗದಿಪಡಿಸಿದ ದರಕ್ಕೆ ಮನೆಗಳನ್ನು ಹಸ್ತಾಂತರ ಮಾಡುವ ಬಗ್ಗೆ

**ಉತ್ತರ:** ಬೆಂಗಳೂರು ನಗರದ ಜನಸಂಖ್ಯೆಯು ಒಂದು ಕೋಟಿಯನ್ನು ಮೀರಿರುತ್ತದೆ ಮತ್ತು ಇತ್ತೀಚೆಗೆ ಪ್ರಪಂಚದಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ಮಹಾನಗರಗಳಲ್ಲಿ ಈ ನಗರವೂ ಸಹ ಒಂದಾಗಿರುತ್ತದೆ. ಬೆಳೆಯುತ್ತಿರುವ ಈ ನಗರಕ್ಕೆ ವಸತಿಯನ್ನು ಪೂರೈಸುವುದು ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಪೂರೈಸುವುದು ಬಹುಮುಖ್ಯವಾಗಿ ಅಗತ್ಯವಾಗಿರುತ್ತದೆ. ಭಾರತ ಸರ್ಕಾರವು ಪದೇ ಪದೇ ಈ ಬಗ್ಗೆ ಒತ್ತಾಯಿಸುತ್ತಾ ಸಾರ್ವಜನಿಕ ಜಮೀನುಗಳಲ್ಲಿ ಧಾರಣೀಯ ವಸತಿಯನ್ನು ಉತ್ತೇಜಿಸುತ್ತಿದೆ.

ಈ ಸಂಬಂಧವಾಗಿ, 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ 1 ಲಕ್ಷ ಧಾರಣೀಯ ಮನೆಗಳನ್ನು ಬೆಂಗಳೂರಿನಲ್ಲಿ ನೆಲೆಸಿರುವ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗಾಗಿ ನಿರ್ಮಿಸುವುದಾಗಿ ಸರ್ಕಾರವು ಘೋಷಿಸಿ, ಈ ಸಂಬಂಧ ಸ್ವಯಂ ಆಧಾರಿತ ಮಾದರಿಯ ವಸತಿ ಯೋಜನೆಯಡಿ, ಆರ್ಥಿಕ ದುರ್ಬಲ ವರ್ಗದವರು ಹಾಗೂ ಅರ್ಹ ಬಡಜನರಿಗೆ ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಕಂದಾಯ ಇಲಾಖೆಯು ಉಚಿತವಾಗಿ ಒದಗಿಸುವ ಸರ್ಕಾರಿ ಜಮೀನನ್ನು ಉಪಯೋಗಿಸಿಕೊಂಡು ಬೆಂಗಳೂರು ನಗರದ ಸುತ್ತಮುತ್ತ 1ಲಕ್ಷ ಬಹುಮಹಡಿ ಮನೆಗಳನ್ನು ನಿರ್ಮಿಸಲು ಸರ್ಕಾರಿ ಆದೇಶ ಸಂಖ್ಯೆ: ವಇ:57:ಹೆಚ್ಎಹೆಚ್:2017, ಬೆಂಗಳೂರು ದಿನಾಂಕ: 23.10.2017 ಹೊರಡಿಸಲಾಗಿತ್ತು.

ಈ ಆದೇಶದಲ್ಲಿ ಒಂದು ಫ್ಲಾಟ್‌ನ ಬೆಲೆಯನ್ನು ರೂ6.00 ಲಕ್ಷಗಳಿಗೆ ನಿಗಧಿಪಡಿಸಲಾಗಿದ್ದು. ಈ ಪೈಕಿ ಕೇಂದ್ರ ಸರ್ಕಾರವು ಪ್ರತಿ ಫಲಾನುಭವಿಗೆ ರೂ.1.50 ಲಕ್ಷಗಳನ್ನು ಸಹಾಯಧನವಾಗಿ ಹಾಗೂ ರಾಜ್ಯ ಸರ್ಕಾರವು ಕೇವಲ ಪ.ಜಾ/ ಪ.ಪಂ ಫಲಾನುಭವಿಗಳಿಗೆ ರೂ. 1.80 ಲಕ್ಷಗಳ ಸಹಾಯಧನವನ್ನು ಮಾತ್ರ ನೀಡುತ್ತಿತ್ತು. ಆದರೆ, ಇತರೆ ವರ್ಗದ ಫಲಾನುಭವಿಗಳಿಗೆ ರಾಜ್ಯವು ಸಹಾಯಧನ ನೀಡುತ್ತಿರಲ್ಲಿಲ್ಲ. ಅದರಂತೆ ಕೊರತೆ ಬೀಳುತ್ತಿದ್ದ ಮೊತ್ತವನ್ನು ಫಲಾನುಭವಿಗಳಿಂದ ಅಥವ Cross Subsidization ನಿಂದ ಭರಿಸಲು ಆದೇಶಿಸಲಾಗಿತ್ತು.

ಮುಂದೆ, ಸರ್ಕಾರವು, PMC/ DPR ಸಮಾಲೋಚಕರ ವೆಚ್ಚ, ವಿದ್ಯುತ್ ಶುಲ್ಕ ಮತ್ತಿತರರೆ ಕಡ್ಡಾಯ ಶುಲ್ಕಗಳನ್ನು ಪರಿಗಣಿಸಿ 1BHK ಫ್ಲಾಟ್‌ನ ಬೆಲೆಯನ್ನು ರೂ. 10.60 ಲಕ್ಷ ಹಾಗೂ 2BHK ಮನೆಯ ಬೆಲೆಯನ್ನು ರೂ.15.00 ಲಕ್ಷಗಳಿಗೆ ಪರಿಷ್ಕರಿಸಿ ನಿಗಧಿಪಡಿಸಿತು. ಅಂತಯೇ, ರಾಜ್ಯ ಸರ್ಕಾರದ ವಸತಿ ಯೋಜನೆಯಾದ ವಾಜಪೇಯಿ ನಗರ ವಸತಿ ಯೋಜನೆಯಡಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೂ ರೂ. 1.2 ಲಕ್ಷಗಳ ಸಹಾಯಧನವನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ: ವಇ 31 ಹೆಚ್‌ಎಫ್‌ಎ 2019 (ಭಾಗ-1), ದಿನಾಂಕ:16.01.2020 ರಲ್ಲಿ ಆದೇಶ ಹೊರಡಿಸಲಾಯಿತು.

ಕೇಂದ್ರ ಸರ್ಕಾರವು ದಿನಾಂಕ: 01.01.2022 ರಿಂದ ಅನ್ವಯವಾಗುವಂತೆ, ಸರ್ಕಾರಿ ಗುತ್ತಿಗೆ ಕಾಮಗಾರಿಗಳ GST ತೆರಿಗೆಯನ್ನು 18% ಏರಿಸಿದ ಪರಿಣಾಮ ಏರಿಕೆಯಾಗಿರುವ ಶೇ.6 ರಷ್ಟು GST ಮತ್ತು ಫಲಾನುಭವಿಗಳಿಂದ ಸಂಗ್ರಹಿಸಲಾಗಿರುವ ಮೊತ್ತದ ಮೇಲೆ ಶೇ.1 ರಷ್ಟು ಸೇರಿ ಒಟ್ಟಾರೆ ರೂ.60,000/-ಗಳನ್ನು ಹೆಚ್ಚುವರಿಯಾಗಿ ಫಲಾನುಭವಿಗಳಿಂದ ಸಂಗ್ರಹಿಸಲು ದಿನಾಂಕ: 08.08.2023 ರಂದು ಅನುಮೋದನೆ ನೀಡಿದೆ. ಇದಲ್ಲದೇ ಪ್ರತಿ ಫಲಾನುಭವಿಗಳ ಫ್ಲಾಟ್‌ಗಳಿಗೆ ವಿದ್ಯುತ್ ಸಂಪರ್ಕದ ಠೇವಣಿ ರೂ.3,000/- ಗಳನ್ನು (3 ತಿಂಗಳ ಕನಿಷ್ಠ ಠೇವಣಿ ಮತ್ತು ಮೀಟರ್ ವೆಚ್ಚ ಸೇರಿ) ಪರಿಗಣಿಸಿ ಪ್ರಸ್ತುತ 1BHK ಫ್ಲಾಟ್‌ನ ದರ ರೂ. 11.23 ಲಕ್ಷಗಳಾಗಿರುತ್ತದೆ.

| ವಿವರ | ರೂ. |
|---|---|
| ಸರ್ಕಾರದ ಆದೇಶ ಸಂಖ್ಯೆ: ವಇ 31 ಹೆಚ್‌ಎಫ್‌ಎ 2019 (ಭಾಗ-1), ದಿನಾಂಕ:16.01.2020 | 10,60,000/- |
| ಸರ್ಕಾರದ ಪತ್ರ ಸಂಖ್ಯೆ: ವಇ 76 ಹೆಚ್‌ಎಫ್‌ಎ 2023, ದಿನಾಂಕ:08.08.2023 | 60,000/ |
| ವಿದ್ಯುತ್ ಸಂಪರ್ಕದ ಠೇವಣಿ & ಮೀಟರ್ ವೆಚ್ಚ | 3,000/- |
| ಒಟ್ಟು | **11,23,000/-** |

ಈ ಮೇಲಿನ ಎಲ್ಲಾ ಅಂಶಗಳಿಂದ ಸರ್ಕಾರವು ಪ್ರತಿ ಫಲಾನುಭವಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಹಾಯಧನವನ್ನು ಒದಗಿಸಲಾಗಿದ್ದು, ಉಳಿಕೆ ಮೊತ್ತವನ್ನು ಕ್ರೋಢಿಕರಿಸಲು ಫಲಾನುಭವಿಗಳಿಗೆ ಬ್ಯಾಂಕ್‌ನಿಂದ ಗೃಹಸಾಲ ಒದಗಿಸಲು ನೆರವು ನೀಡಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪ್ರತಿ ಫಲಾನುಭವಿಗೆ ತಿಳಿಸಿ, ಪೂರ್ಣಗೊಂಡಿರುವ ಯೋಜನಾ ಸ್ಥಳಗಳಲ್ಲಿ ನೋಂದಣಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಕಡತ ಸಂಖ್ಯೆ: ವಇ 41 ಹೆಚ್‌ಎಫ್‌ಎ 2024

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.